ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1783

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀಮತಿ ಭಾರತಿ ಶೆಟ್ಟಿ
(ನಾಮನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : 14.03.2022

ಉತ್ತರಿಸುವ ಸಚಿವರು : ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ತೂಕದ ಯಂತ್ರಗಳನ್ನು ಮೋಸ ಮಾಡಲು ಅನುವಾಗುವಂತೆ ಪರಿವರ್ತಿಸುತ್ತಿರುವ ವ್ಯಾಪಾರಿಗಳ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ಅಂಕಿ - ಅಂಶ ಸಹಿತ ಮಾಹಿತಿ ಒದಗಿಸುವುದು)	ಕಾನೂನು ಮಾಪನಶಾಸ್ತ್ರ ಕಾಯ್ದೆ 2009 ಹಾಗೂ ಕಾನೂನು ಮಾಪನಶಾಸ್ತ್ರ ನಿಯಮಗಳನುಸಾರ ತೂಕದ ಯಂತ್ರಗಳನ್ನು ಮೋಸ ಮಾಡಲು ಅನುವಾಗುವಂತೆ ಪರಿವರ್ತಿಸುವ ವ್ಯಾಪಾರಿಗಳ ವಿರುದ್ಧ ಪ್ರಕರಣವನ್ನು ದಾಖಲಿಸಿ ಶಿಕ್ಷಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಕಾನೂನು ಮಾಪನಶಾಸ್ತ್ರ ಕಾಯಿದೆಯ Section 26ರನ್ವಯ ತೂಕಗಳು/ಅಳತೆಗಳು/ತೂಕದ ಯಂತ್ರಗಳನ್ನು ವಂಚನೆ ಹಾಗೂ ಮೋಸ ಮಾಡುವಂತೆ ಬದಲಾಯಿಸಿ ಉಪಯೋಗಿಸುತ್ತಿರುವ ವ್ಯಾಪಾರಸ್ಥರ ವಿರುದ್ಧ ಪ್ರಕರಣಗಳನ್ನು ದಾಖಲಾಸಿ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಹೂಡಲಾಗುತ್ತಿದೆ. ಕಳೆದ ಎರಡು ವರ್ಷಗಳಲ್ಲಿ ದಾಖಲಿಸಿರುವ ಪ್ರಕರಣಗಳ ಮಾಹಿತಿ ಈ ಕೆಳಕಂಡಂತಿದೆ.

ಕೈಗೊಳ್ಳಲಾದ ತಪಾಸಣೆ ಸಂಖ್ಯೆ	ಹೂಡಲಾದ ಮೊಕದ್ದಮೆಗಳ ಸಂಖ್ಯೆ	ವಸೂಲಿ ಮಾಡಲಾದ ದಂಡ	ದಾಖಲಿಸಿರುವ ಪ್ರಕರಣಗಳ ವಿವರ
18	18	4,31,000	10 ಪ್ರಕರಣಗಳಿಗೆ ಸಂಬಂಧಿಸಿದಂತೆ ಪೋಲೀಸ್ ಠಾಣೆಗಳಲ್ಲಿ ದೂರನ್ನು ದಾಖಲಿಸಲಾಗಿರುತ್ತದೆ. 8 ಪ್ರಕರಣಗಳಲ್ಲಿ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ಮೊಕದ್ದಮೆಯನ್ನು ಹೂಡಲಾಗಿದೆ

(ಆ)	ಯಾವ ಯಾವ ವಸ್ತುಗಳ ತೂಕವನ್ನು ಯಾವ ರೀತಿ ಮೋಸ ಮಾಡಲಾಗುತ್ತಿದೆ; ಇದಕ್ಕೆ ಅನುಸರಿಸುತ್ತಿರುವ ವಿಧಿ-ವಿಧಾನಗಳೇನು; (ವಸ್ತುವಾರು ವಿವರ ಒದಗಿಸುವುದು)	ಈ ಕೆಳಕಂಡಂತೆ ತೂಕಗಳಲ್ಲಿ ವ್ಯತ್ಯಾಸವನ್ನು ಮಾಡಿ ಮೋಸ ಮಾಡುತ್ತಿರುವುದು ಕಂಡು ಬಂದಿರುತ್ತದೆ. • ನ್ಯಾಯಬೆಲೆ ಅಂಗಡಿ ಹಾಗೂ ದಿನಸಿ ಅಂಗಡಿಗಳಲ್ಲಿ ಟೇರ್ ವೇಟ್‌ನ್ನು ತೆಗೆಯದೇ ಅಥವಾ ತೂಕವನ್ನು ಮಾಡಲು ಬಳಸುವ ಖಾಲಿ ಡಬ್ಬದ ತೂಕವನ್ನು ಕಳೆಯದೆ ವಂಚನೆ ಮಾಡಲಾಗುತ್ತಿದೆ. • ಸ್ವಿಚ್/ ರಿಮೋಟ್ ಬಳಸಿ ಐರನ್ ಮತ್ತು ಸ್ಟೀಲ್ ಮಾರಾಟ ಅಂಗಡಿಗಳು, ಮಟನ್ ಶಾಪ್‌ಗಳು, ಸ್ಕ್ರ್ಯಾಪ್ ಮತ್ತು ಹಳೇ ಪೇಪರ್ ಅಂಗಡಿಗಳಲ್ಲಿ ವಂಚನೆ ಮಾಡಲಾಗುತ್ತಿದೆ. • ಎಪಿಎಂಸಿ ಯಾರ್ಡ್ ಮತ್ತು ಈರುಳ್ಳಿ ಮಂಡಿಯಲ್ಲಿ ರೈತರ ಸಂತೆಗಳಲ್ಲಿ ಸ್ವಿಚ್ ಬಳಸಿ ರೈತರಿಗೆ ಮೋಸ ಮಾಡುತ್ತಿರುವುದು ಕಂಡು ಬಂದಿರುತ್ತದೆ. • ಪೆಟ್ರೋಲ್ ಬಂಕ್ ಗಳಲ್ಲಿ Integrated Circuit (IC)ಬಳಸಿ ಕಡಿಮೆ ಪ್ರಮಾಣದ ವಿತರಣೆಯನ್ನು ಮಾಡಿ ವಂಚನೆ ಮಾಡಲಾಗುತ್ತಿದೆ.
(ಇ)	ಅಳತೆ- ತೂಕ- ಗುಣಮಟ್ಟದ ಮೋಸದಿಂದ ಗ್ರಾಹಕರಿಗೆ ಆಗುತ್ತಿರುವ ಅನ್ಯಾಯಗಳನ್ನು ತಡೆಗಟ್ಟಲು ಸರ್ಕಾರ ಕಳೆದ 2 ವರ್ಷಗಳಿಂದ ಕೈಗೆದುಕೊಂಡಿರುವ ಕ್ರಮಗಳೇನು;	ಅಂಶ "ಆ" ರಲ್ಲಿ ವಿವರಿಸಿರುವಂತೆ ಕ್ರಮವಹಿಸಲಾಗುತ್ತಿದೆ.
ಈ)	ಆರೋಗ್ಯಕ್ಕೆ ಹಾನಿಕಾರವೆಂದು ತಿಳಿದಿದ್ದು, ಅಂತಹ ವಸ್ತುಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದನ್ನು ನಿರ್ಬಂಧಿಸಲು ಆಹಾರ ವಸ್ತುಗಳಿಗೆ ಪ್ರಸ್ತುತದಲ್ಲಿ ಇರುವ ನಿಯಮಗಳನ್ನು ಮತ್ತಷ್ಟು ಮಾರ್ಪಾಡಿಸಿ ಸಲಹೆ ನೀಡಲು; ಈ ಕ್ಷೇತ್ರದ ತಜ್ಞರ ಸಮಿತಿ ರಚಿಸುವ ಬಗ್ಗೆ ಸರ್ಕಾರದ ನೀತಿ ನಿಯಮಗಳೇನು?	ಆಹಾರ ಸುರಕ್ಷತೆ ಮತ್ತು ಗುಣಮಟ್ಟಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ನ್ನು ಜಾರಿಗೆ ತಂದಿರುತ್ತದೆ. ಸದರಿ ಕಾಯ್ದೆಯನ್ವಯ ಅಗತ್ಯ ಕ್ರಮವಹಿಸಲಾಗುತ್ತಿದೆ.

ಆನಾಸ 38 ಕಾಮಾಸೇ 2022 (ಇ-ಆಫೀಸ್)

(ಉಮೇಶ್ ವಿ. ಕತ್ತಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.